ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,,
ಕನಕಪುರ

ಸಿ.ಸಿ ನಂ.**124/2018**

| | | | |
|---|---|---|---|
| **ಚಾಸಾ ಃ** | **4** | **ಪ್ರಾಸಾಃ-** | **5** |

| | |
|---|---|
| ಹೆಸರು | ಶಿವರಾಮು |
| ತಂದೆಯ ಹೆಸರು | ದೊಡ್ಡಕರಿಯಪ್ಪ |
| ವಯಸ್ಸು | 55 |
| ಉದ್ಯೋಗ | ವ್ಯವಸಾಯ |
| ವಿಳಾಸ | ದುಂತೂರು ಗ್ರಾಮ |

- - - - - - - - - - - - - - - - - - - - - - - - - - - - - - -

**ದಿಃ08.10.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ಆರೋಪಿತನ ಪರಿಚಯವಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ. ನನಗೆ ಈಗ ತೋರಿಸಿದ ಒಂದು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ-೨ ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-೨(ಸಿ) ಎಂದು ಗುರುತಿಸಲಾಯಿತು.

ನಿಪಿ-೨ ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು

ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ದಿನಾಂಕ.13.04.2017 ರಂದು ಬೆಳಿಗ್ಗೆ 10ಃ00 ರಿಂದ 10ಃ30 ಗಂಟೆ ಸಮಯದಲ್ಲಿ ಘಟನಾ ಸ್ಥಳದಲ್ಲಿ ಪೋಲೀಸರು ನನ್ನ ಸಮಕ್ಷಮ ನಿಪಿ-2 ರಂತೆ ಪಂಚನಾಮ ಕ್ರಮ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸರಿ ಇದೆ,**

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**

ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,,
ಕನಕಪುರ

ಸಿ.ಸಿ ನಂ.**124/2018**

| | | | |
|---|---|---|---|
| **ಚಾಸಾ ಃ** | **9** | **ಪ್ರಾಸಾಃ-** | **6** |
| ಹೆಸರು | | ಜಯರಾಮು | |
| ತಂದೆಯ ಹೆಸರು | | ಲೇಟ್ ಈರಪ್ಪ | |
| ವಯಸ್ಸು | | **62** | |
| ಉದ್ಯೋಗ | | ನಿವೃತ್ತ ಜೀವನ | |
| ವಿಳಾಸ | | ಮಳವಳ್ಳಿ | |

- - - - - - - - - - - - - - - - - - - - - - - - - - - - - -

**ದಿಃ08.10.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ನಾನು **೨೦೧೩** ರಿಂದ **೨೦೧೮** ರ ವರೆಗೆ ಸಾತನೂರು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.**13.04.2017** ರಂದು ಬೆಳಿಗ್ಗೆ **8ಃ00** ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-**1** ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಆಧಾರದ ಮೇಲೆ ಠಾಣ ಗುನ್ನ ನಂ.**68/2017** ರಲ್ಲಿ ಕಲಂ ಭಾ.ದಂ. ಸಂಹಿತೆ **279, 337** ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ.**13.04.2017** ರಂದು ಬೆಳಿಗ್ಗೆ **10ಃ00** ರಿಂದ **10ಃ30** ಗಂಟೆ ಸಮಯದಲ್ಲಿ ಚಾಸಾ-**1** ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-**3** ಮತ್ತು **4** ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ.

ದಿನಾಂಕ.**19.05.2017** ರಂದು ಮಧ್ಯಾಹ್ನ **3ಃ00** ರಿಂದ **3ಃ30** ಗಂಟೆ ಸಮಯದಲ್ಲಿ ಆರೋಪಿ ಬಸ್ ನಂ.ಕೆಎ-**40**-ಎಫ್-**66** ರ ಕೆ.ಎಸ್.ಆರ್.ಟಿ.ಸಿ ವಾಹನವನ್ನು ನಮ್ಮ ಠಾಣಾ ಆವರಣದಲ್ಲಿ ತಂದು ನಿಲ್ಲಿಸಿದ್ದು, ಸದರಿ ಬಸ್ಸನ್ನು ಪಂಚರಾದ ಚಾಸಾ-**4** ಮತ್ತು **5** ರವರ ಸಮಕ್ಷಮ ಪಂಚನಾಮೆ ಮಾಡಿ ಬಸ್ಸನ್ನು ಅಮಾನತ್ತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ **75/2017** ರಲ್ಲಿ ಅಳವಡಿಸಿಕೊಂಡಿರುತ್ತೇನೆ.

ನಿಪಿ-**೨** ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**೨**(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**೪**, ಸಾಕ್ಷಿಯ ಸಹಿಯನ್ನು ನಿಪಿ-**೪**(ಎ) ಎಂದು ಗುರುತಿಸಲಾಯಿತು. ದೂರಿನಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**೧**(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-**೫** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**೫**(ಎ) ಎಂದು ಗುರುತಿಸಲಾಯಿತು.

ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-**೧೦** ರವರಿಗೆ ವರ್ಗಾವಣೆ ಮಾಡಿರುತ್ತೇನೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಕೆಎನ್ಎಂ ವಕೀಲರಿಂದಃ-

ಅಪಘಾತವು ಠಾಣೆಯ ಮುಂಭಾಗ ಆಗಿರುತ್ತದೆ ಎಂದರೆ ಸರಿ. ನಮ್ಮ ಠಾಣೆಯ ಅಕ್ಕಪಕ್ಕ ಯಾವುದೇ ಗಲಾಟೆಯಾದರೂ ನಾವು ತಕ್ಷಣ ಹೋಗಿ ಸ್ಥಳಕ್ಕೆ ಭೇಟಿ ನೀಡುತ್ತೇವೆ ಎಂದರೆ ಸರಿ. ಅಪಘಾತವಾದ ನಂತರ ಸುಮಾರು **1** ವರೆ ತಿಂಗಳ ನಂತರ ಪಿರ್ಯಾದಿಯು ದೂರನ್ನು ನೀಡಿರುತ್ತಾರೆ. ಗಾಯಾಳು ಅಪಘಾತವಾದ ದಿನದಂದು ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಎಂದು ತೋರಿಸಲು ನನ್ನ ಮುಂದೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಠಾಣೆಯಿಂದ ಅಪಘಾತವಾದ ಸ್ಥಳವು ಸುಮಾರು **15** ರಿಂದ

**20** ಅಡಿ ಅಂತರವಿರುತ್ತದೆ. ಚಾಸಾ-**1** ರವರು ದೂರನ್ನು ಬೆಳಿಗ್ಗೆ **10:00** ಗಂಟೆಗೆ ನೀಡಿರುತ್ತಾರೆ. ಗಾಯಾಳು ಕೆ.ಎಸ್.ಆರ್.ಟಿಸಿ ಬಸ್ಸಿನಲ್ಲಿ ಪ್ರಯಾಣಿಕರಾಗಿ ಪ್ರಯಾಣ ಮಾಡದೆ ಇದ್ದರೂ ಸಹ ಬಸ್ಸಿನ ಹಿಂಭಾಗದ ಸೀಟಿನಲ್ಲಿ ಕುಳಿತು ಅಂಮ್ಸ್ ಬಂದಾಗ ಚಾಲಕ ಬ್ರೇಕ್ ಹಾಕಿ ಮುಂದಿನ ಸೀಟಿನವರಿಗೆ ತಗುಲಿ ಗಾಯವಾಗಿರುತ್ತದೆ ಎಂದು ಸುಳ್ಳು ದೂರು ನೀಡಿದ ಮೇರೆಗೆ ನಾನು ಸುಳ್ಳು ದೂರನ್ನು ದಾಖಲು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಒಂದು ವೇಳೆ ಗಾಯಾಳುವಿಗೆ ಅದೇ ದಿನ ಗಾಯಗಳಾಗಿದ್ದರೆ ದೂರನ್ನು ಆದೇ ದಿನ ನೀಡಬಹುದಾಗಿತ್ತು, ಅವರಿಗೆ ಗಾಯಗಳೆ ಆಗದಿದ್ದ ಕಾರಣ ತಡವಾಗಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಅಪಘಾತವಾದ ಸ್ಥಳವು ಸಾರ್ವಜನಿಕ ಸ್ಥಳವಾಗಿದ್ದು, ಅಲ್ಲಿದ್ದಂತಹ ಸಾರ್ವಜನಿಕರ ಸಹಿಯನ್ನು ನಿಪಿ-**2** ಕ್ಕೆ ಪಡೆದಿರುವುದಿಲ್ಲ ಎಂದರೆ ಸರಿ. ಗಾಯಾಳು ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಅವರ ಸಂಬಂಧಿಕರನ್ನೇ ಸೇರ್ಪಡೆ ಮಾಡಿ ಅವರಿಗೆ ಅನುಕೂಲ ಮಾಡಲು ಸುಳ್ಳು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಠಾಣೆಯ ಅವರಣದಲ್ಲಿ ಮಹಜರ್ ಜರುಗಿಸಿ ಯಾವುದೇ ಬಸ್ಸನ್ನು ಅಮಾನತ್ತುಪಡಿಸಿಕೊಳ್ಳದೆ ಇದ್ದರೂ ಸಹ ಉದ್ದೇಶ ಪೂರ್ವಕವಾಗಿ ಸದರಿ ಬಸ್ಸಿನ ನಂಬರನ್ನು ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಓ ಹೇ ಕೇ ಸರಿ ಇದೆ,**

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**